## ಕಾಡಿಗೆ ಕಣ್ಣು

ಆಳವಾದ ನೀರಿದ್ದ ಕಡೆ, ನಿಲ್ಲಿಸಿದ್ದ ಬೋಟಿನ ಮೇಲಿದ್ದೆವು. ಹಸ್ತಿಗಳು ನೀರೊಳಗೆ ಧುಮುಕಿ ಈಜಿ ಅಟ್ಟಿಸಿಕೊಂಡು ಬಂದು ನಮ್ಮನ್ನು ಹೊಡೆಯುವ ದುಸ್ಸಾಹಸ ಎಂದಿಗೂ ಮಾಡಲಾರವು ಎಂಬ ಭಂಡ ನಂಬಿಕೆಯಿತ್ತು. ಅವು ಒಂದು ವೇಳೆ ನುಗ್ಗಿ ನಮ್ಮತ್ತ ಬಂದರೂ ನಾವು ತಪ್ಪಿಸಿಕೊಂಡು ಓಡಿಹೋಗಲು ಹೇಗೂ ಟಕಟಕ, ಕಟಕಟ, ಫಟಾಫಟ್ ಎಂದು ಶಬ್ದ ಮಾಡುವ ಬೋಟಿತ್ತು. ನಮಗಲ್ಲದಿದ್ದರೂ ಬೋಟಿನ ಕರ್ಕಶ ಶಬ್ದಕ್ಕೆ ಗಜಗಳು ಹೆದರುವ ಸಾಧ್ಯತೆ ಇತ್ತು. ಅರಣ್ಯ ಇಲಾಖೆಯವರು ಪ್ಯಾಟ್ರೋಲಿಂಗ್ ಸಮಯದಲ್ಲಿ ಇದೇ ವಟಗುಟ್ಟುವ ಬೋಟನ್ನು ಇಲ್ಲಿ ಬಳಸುವುದರಿಂದ ಬೋಟಿನ ಭಾರಿ ಸದ್ದಿಗೆ ಗಜಗಳು ಅಕ್ಷರಶಃ ಒಗ್ಗಿ ಹೋಗಿದ್ದವು.

ನಾವು ಬೋಟಿನ ಮೆಷಿನ್ ಬಂದ್ ಮಾಡಿಸಿ ಹಾಗೇ ನೀರ ಮೇಲೆ ತೇಲುತ್ತಾ ನಿಂತೆವು. ಗಜಗಳ ಎಲ್ಲಾ ಚಟುವಟಿಕೆ ನಿಗಾ ಇಟ್ಟು ನೋಡುವುದು ನಮ್ಮ ಏಕೈಕ ಉದ್ದೇಶವಾಗಿತ್ತು. ಯಾವುದೇ ಕಾಡುಪ್ರಾಣಿ ತನ್ನನ್ನು ಅನ್ಯರು ಗಮನಿಸುತ್ತಿದ್ದಾರೆ ಎಂದು ಅರಿವಾದಾಗ ಅದರ ಸಹಜ ನಡವಳಿಕೆ ಬದಲಾಗುತ್ತದೆ. ಈ ವಿಚಾರದಲ್ಲಿ ಕಾಡು ಪ್ರಾಣಿಗಳನ್ನು ಕದ್ದು, ಸದ್ದಿಲ್ಲದೆ ನೋಡುವುದೇ ಸರಿಯಾದ ಕ್ರಮ. ಈ ಕಸುಬು ಮಾಡಲು ಮನೆಮಠ ತೊರೆದು ಕಾಡಿನಲ್ಲೇ ಹಲವು ವರ್ಷಗಳು ಝೂಂಢಾ ಹೂಡಬೇಕು. ಇದಕ್ಕೆಲ್ಲಾ ನಾವು ತಯಾರಿದ್ದರೂ ನಮ್ಮ ನಂಬಿರುವ ಕುಟುಂಬದವರು ಕಲ್ಲು, ಕಸಬರಿಕೆ, ದೊಣ್ಣೆ, ಮಚ್ಚು ಎಂದು ಎಚ್ಚರಿಸುತ್ತಾರೆ. ಇದೆಲ್ಲಾ ನಮ್ಮಂಥ ಸಾಮಾನ್ಯ ನೋಡುಗರಿಗೆ ಸಾಧ್ಯವಿಲ್ಲದ ಕೆಲಸ.

ಹೀಗಿರುವಾಗಲೇ ಮತ್ತೊಂದು ಮೂಲೆಯಿಂದ ಆನೆಗಳ ದೊಡ್ಡ ಗುಂಪೊಂದು ಇಳಿದು ಬಂತು. ಮೊದಲು ಬಂದಿದ್ದ ಗುಂಪಿನ ಆನೆಗಳು ಅವುಗಳತ್ತ ಒಮ್ಮೆ ತಿರುಗಿ ನೋಡಿ ಯಥಾಪ್ರಕಾರ ತಮ್ಮ ಕೆಸರಾಟದಲ್ಲಿ ಮುಳುಗಿ ಹೋದವು. ಎರಡು ಗುಂಪುಗಳು ಪರಸ್ಪರ ಅಂತರ ಕಾಯ್ದುಕೊಂಡು ತಮ್ಮ ಪಾಡಿಗೆ ತಾವು ನೀರು ಕುಡಿಯುತ್ತಾ, ಸೊಂಡಿಲೆತ್ತಿ ನೀರು ಹಾರಿಸುತ್ತಾ, ಕೆಸರು ಎರಚಾಡುತ್ತಾ ಉಲ್ಲಾಸ ತೋರಿದವು. ಕೆಲವೊಂದು ಹಸ್ತಿಗಳು ಮಣ್ಣು ಕೂಡ ತಿನ್ನುತ್ತಿದ್ದವು. ಪೋಷಕಾಂಶಗಳ ಕೊರತೆಯಾದಾಗ ಪ್ರಾಣಿಗಳು ಮಣ್ಣು ತಿನ್ನುವುದು, ಲವಣಾಂಶ ಇರುವ ಕಲ್ಲುಗಳನ್ನು ನೆಕ್ಕುವುದು ಸಾಮಾನ್ಯವಾದ ಸಂಗತಿ. ಇನ್ನು ಮೈಮೇಲೆ ಕೆಸರನ್ನು ಸುರಿದುಕೊಳ್ಳುವುದಂತೂ ಅವಕ್ಕೆ ಪರಮಾನ್ನ ಉಂಡಷ್ಟು ಸುಖ ಕೊಡುವ ಕ್ರಿಯೆ. ಕಪ್ಪು ಚರ್ಮವಿರುವ ಕಾಡಿನ ಪ್ರಾಣಿಗಳು ತಮ್ಮ ತ್ವಚೆಯ ರಕ್ಷಣೆಗೆ ಹಾಗೂ ಬಿಸಿಲಿನ ಝಳದ ಹೊಡೆತ ತಪ್ಪಿಸಿಕೊಳ್ಳಲು ಈ ಬಗೆಯ ಮಣ್ಣಿನ ಸ್ನಾನವನ್ನು ಮಾಡುತ್ತವೆ.

ನಮಗೆ ತೀರಾ ಸಮೀಪದಲ್ಲಿದ್ದ ತಾಯಿಯಾನೆ ತನ್ನ ಎಳೆಯ ಮಕ್ಕಳನ್ನು ಹಿಡಿದಿಡಿದು ಬಲವಂತವಾಗಿ ನೀರಿಗೆ ತಳ್ಳುತ್ತಿದ್ದಳು. ಮರಿಗಳು ಹೆದರಿ ದಡಕ್ಕೆ ಬಂದರೆ ಮತ್ತೆ ನೀರಿಗೆ ತಳ್ಳಿಕೊಂಡು ಹೋಗಿ ದೂಡಿ ಎಸೆಯುತ್ತಿದ್ದಳು. ಈ ದೃಶ್ಯ ನೋಡಲು ಬಲು ತಮಾಷೆಯಾಗಿತ್ತು. ಪ್ರಾಯಶಃ ತಾಯಿ, ಮಕ್ಕಳಿಗೆ ಈಜು ಕಲಿಸುತ್ತಿದ್ದಾಳೆ. ಒಂದೊಮ್ಮೆ ಮಗು ನೀರಲ್ಲಿ ಮುಳುಗಿ ಕಷ್ಟಪಡುವುದು ಕಂಡರೆ ಘೀಳಿಡುತ್ತಾ ಆತಂಕದಿಂದ ಓಡಿ ಘಟ್ಟಂತ ದಡಕ್ಕೆ ಎಳೆದು ತರುತ್ತಿದ್ದಳು. ಒಂದು ಮಗು ನೀರಿಗಿಳಿಯಲು ಸಂಕೋಚ ತೋರಿಸುತ್ತಾ, ಅವ್ವನ ಕೈಗೂ ಸಿಗದೆ ಸತಾಯಿಸಿ ಓಡುತ್ತಿತ್ತು. ಅದರ ಬೆನ್ನಟ್ಟಿ ಸೊಂಡಿಲಲ್ಲಿ ಸುತ್ತಿ ಎಳೆದು ತಂದು ತಾಯಿ ನೀರಿಗೆ

